ದಿನಾಂಕ:21-06-2022ರಂದು ಯೋಜನೆಯ "ನಿಯೋಜಿತ ಸ್ಥಳ" ಯಕ್ಷಂತಿ ಗ್ರಾಮ, ತಾ|| ಸುರಪುರ ಜಿ|| ಯಾದಗಿರಿಯಲ್ಲಿ ಬೆಳಗ್ಗೆ 11.00ಗಂಟೆಗೆ "ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬೆಂಗಳೂರುರವರು ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರು ಯಕ್ಷಂತಿ ಮರಳು ಬ್ಲಾಕ್‌ನಲ್ಲಿ ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ಕೃಷ್ಣಾ ನದಿ ಪಕ್ಕದ ಸರ್ವೆ ನಂ. 91(p), 93, 94, 95, 100, 101, 102, 103, 122, 123, 131, 132, 135, 136 , 139, 140, 146, 147, 148, 149, 153, 154, 157, 158, 161, 162, 164, 165 & 166 ಯಕ್ಷಂತಿ ಗ್ರಾಮ, ವಡಿಗೆರೆ ತಾಲ್ಲೂಕು, ಯಾದಗಿರಿ ಜಿಲ್ಲೆಯಲ್ಲಿ ಒಟ್ಟು 50.00 ಎಕರೆ ಪ್ರದೇಶದಲ್ಲಿ ಪ್ರತಿ ವರ್ಷಕ್ಕೆ 2,08,818 ಟನ್ ಸಾಮರ್ಥ್ಯದ ಮರಳು ಗಣಿಕಾರಿಕೆಯನ್ನು ಅರೆ-ಯಾಂತ್ರಿಕೃತ ಪದ್ಧತಿಯ (Opencast semi-mechanized method) ಪ್ರಕಾರ ಪ್ರಸ್ಥಾಪಿಸಿರುವ ಯೋಜನೆಯಿಂದ ಪರಿಸರದ ಮೇಲೆ ಆಗುವ ಪರಿಣಾಮಗಳ ಕುರಿತು ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಲು ಜರುಗಿದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು:

<u>ಹಾಜರಿದ್ದ ಅಧಿಕಾರಿಗಳು :</u>

ಶ್ರೀಯುತರು:

1) ಶ್ರೀ. ಶಂಕರಗೌಡ ಸೋಮನಾಳ, ಕೆ.ಎ.ಎಸ್. (ಆಯ್ಕೆ ಶ್ರೇಣಿ)
ಅಪರ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಪರಿಸರ ಸಾರ್ವಜನಿಕ ಆಲಿಕೆ ಸಭೆ
ಯಾದಗಿರಿ ಜಿಲ್ಲೆ, ಯಾದಗಿರಿ.
2) ಶ್ರೀ. ಮಧುಸೂದನ್,
ಹಿರಯ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕಲಬುರಗಿ.
3) ಶ್ರೀ. ಕೆ.ರಾಜು, ಪರಿಸರ ಅಧಿಕಾರಿಗಳು,
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಯಾದಗಿರಿ
4) ಶ್ರೀ. ಸುರೇಶ ಅಂಕಲಗಿ, ತಹಸೀಲ್ದಾರರು, ವಡಗೇರ ಜಿ|| ಯಾದಗಿರಿ

*****

ಸಭೆಯ ಪ್ರಾರಂಭದಲ್ಲಿ ಶ್ರೀ ಕೆ. ರಾಜು, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಯಾದಗಿರಿ ಇವರು ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಯಾದಗಿರಿ ಇವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವಂತೆ ವಿನಂತಿಸುತ್ತಾ ಸದರಿ ಸಭೆಗೆ ಆಗಮಿಸಿದ ಮಂಡಳಿಯ ಹಿರಿಯ ಪರಿಸರ ಅಧಿಕಾರಿಗಳು, ಕರಾಮಾನಿಮಂ, ಕಲಬುರಗಿ ಇವರನ್ನು ವೇದಿಕೆಯ ಮೇಲೆ ಆಸೀನರಾಗುವಂತೆ ಕೋರಿದರು ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ, ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್‌ನ ಎಲ್ಲಾ ಸಿಬ್ಬಂದಿಗಳಿಗೆ, ಯೋಜನೆಯ ತಾಂತ್ರಿಕ ಸಿಬ್ಬಂಧಿಗಳಿಗೆ, ಪೋಲಿಸ್ ಇಲಾಖಾ ಅಧಿಕಾರಿಗಳಿಗೆ, ಆರೋಗ್ಯ ಇಲಾಖೆ ಸಿಬ್ಬಂದಿಯವರಿಗೆ, ಮಾದ್ಯಮದವರಿಗೆ ಹಾಗೂ ಎಲ್ಲಾ ಸಾರ್ವಜನಿಕರಿಗೆ, ಸಮಸ್ತ ರೈತ ಬಾಂಧವರಿಗೆ ಮತ್ತು ಎಲ್ಲರಿಗೂ ಸ್ವಾಗತವನ್ನು ಕೋರಿದರು.

ಪರಿಸರ ಅಧಿಕಾರಿಗಳು, ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರು ಯಾದಗಿರಿ ಜಿಲ್ಲೆಯ ವಡಗೇರ ತಾಲ್ಲೂಕಿನ ಯಕ್ಷಂತಿ ಮರಳು ಬ್ಲಾಕ್‌ನಲ್ಲಿ ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ಕೃಷ್ಣಾ ನದಿ ಪಕ್ಕದ ಸರ್ವೆ ನಂ. 91(p), 93, 94, 95, 100, 101, 102, 103, 122, 123, 131,132, 135, 136 , 139, 140, 146, 147, 148, 149, 153, 154, 157, 158, 161, 162, 164, 165 & 166 ಯಕ್ಷಂತಿ ಗ್ರಾಮ, ವಡಿಗೆರೆ ತಾಲ್ಲೂಕು, ಯಾದಗಿರಿ

ಜಿಲ್ಲೆಯಲ್ಲಿ ಒಟ್ಟು 50.00 ಎಕೆರೆ ಪ್ರದೇಶದಲ್ಲಿ ಪ್ರತಿ ವರ್ಷಕ್ಕೆ 2,08,818 ಟನ್ ಸಾಮರ್ಥ್ಯದ ಮರಳು ಗಣಿಕಾರಿಕೆಯನ್ನು ಅರೆ-ಯಾಂತ್ರಿಕೃತ ಪದ್ಧತಿಯ (Opencast semi-mechanized method) ಪ್ರಕಾರ ಸ್ಥಾಪಿಸಲು ಉದ್ದೇಶಿಸಿರುವುದಕ್ಕೆ ಯಾದಗಿರಿ ಜಿಲ್ಲೆಗೆ ಸಂಬಂಧಿಸಿದಂತೆ, ಪ್ರಸ್ಥಾಪಿಸಿರುವ ಯೋಜನೆಯ ಕುರಿತಾದ ಹಾಗೂ ಪರಿಸರದ ಮೇಲೆ ಆಗುವ ಪರಿಣಾಮಗಳ ಕುರಿತು ಸಾರ್ವಜನಿಕರಿಂದ ಅಹವಾಲುಗಳನ್ನು/ಸಲಹೆಗಳನ್ನು ಸ್ವೀಕರಿಸಲು, ದಿನಾಂಕ:21-06-2022ರಂದು ನಿಯೋಜಿತ ಸ್ಥಳ, ಯಕ್ಷಂತಿ ಗ್ರಾಮದಲ್ಲಿ, ಬೆಳಗ್ಗೆ 11.00ಗಂಟೆಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಆಯೋಜಿಸಲಾಗಿದೆ ಎಂದು ತಿಳಿಸುತ್ತಾ ಜಿಲ್ಲೆಯ ವಿವಿಧ ಕಛೇರಿಗಳಾದ ಜಿಲ್ಲಾಧಿಕಾರಿಗಳ ಕಛೇರಿ, ಯಾದಗಿರಿ, ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿಗಳ ಕಾರ್ಯಾಲಯ ಜಿಲ್ಲಾ ಪಂಚಾಯತ್, ಯಾದಗಿರಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಯಾದಗಿರಿ, ತಾಲೂಕ ಕಾರ್ಯ ನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ್ ಶಹಾಪೂರ, ಜಿಲ್ಲಾ ಕೈಗಾರಿಕಾ ಕೇಂದ್ರ ಯಾದಗಿರಿ, ಗ್ರಾಮ ಪಂಚಾಯತಿ ಕಾರ್ಯಾಲಯ ಹಯ್ಯಾಳ (ಬಿ), ತಹಸೀಲ್ದಾರರು ಕಾರ್ಯಾಲಯ ವಡಗೇರ ಹಾಗೂ ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಯಾದಗಿರಿ ಇವರುಗಳ ಕಾರ್ಯಾಲಯದಲ್ಲಿ ಯೋಜನೆಯ ಕಾರ್ಯಾಕಾರಿ ಸಾರಾಂಶ (ಆಂಗ್ಲ ಮತ್ತು ಕನ್ನಡ ಭಾಷೆಗಳಲ್ಲಿ), ಅಡಕ ಮುದ್ರಿಕೆ ಮತ್ತು ವರದಿಗಳನ್ನು ಸಾರ್ವಜನಿಕರ ಪರಾಮರ್ಶೆಗಾಗಿ 30ದಿನಗಳ ಮುಂಚಿತವಾಗಿ ಇರಿಸಲಾಗಿತ್ತು ಎಂದು ತಿಳಿಸಿದರು ಹಾಗೂ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಅಧಿಸೂಚನೆಯನ್ನು ರಾಜ್ಯ ಮಟ್ಟದ ಪ್ರಮುಖ ದಿನ ಪತ್ರಿಕೆಗಳಾದ **"ಪ್ರಜಾವಾಣಿ"** ಹಾಗೂ **"ಇಂಡಿಯನ್ ಎಕ್ಸ್‌ಪ್ರೆಸ್"** ಸ್ಥಳೀಯ ದಿನಪತ್ರಿಕೆಯಾದ **ಪ್ರಜಾವಾಣಿ** ಗಳಲ್ಲಿ ದಿ:21-05-2022ರಂದು ಅಧಿಸೂಚನೆಯ ಪ್ರಕಟಣೆಯನ್ನು ನೀಡಲಾಗಿತ್ತು ಹಾಗೂ ಸಾರ್ವಜನಿಕರಿಂದ ಅಹವಾಲುಗಳನ್ನು ಅಹ್ವಾನಿಸಲಾಗಿತ್ತು ಎಂದು ತಿಳಿಸುತ್ತಾ, ಸಭೆಯನ್ನು ಜರುಗಿಸಲು ಅನುಮತಿಸಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ವಿನಂತಿಸಿದರು.

ಸಭೆಯ ಆಧ್ಯಕ್ಷರು ಸಭೆಯನ್ನು ಉದ್ದೇಶಿಸುತ್ತಾ ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್‌ನವರ ತಾಂತ್ರಿಕ ಸಲಹೆಗಾರರಿಗೆ ಉದ್ದೇಶಿತ ಯೋಜನೆಯ ತಾಂತ್ರಿಕ ವಿವರಗಳನ್ನು ಸಭೆಗೆ ಮಂಡಿಸುವಂತೆ ಸೂಚಿಸಿದರು. ಅದರಂತೆ, ಯೋಜನೆಯ ತಾಂತ್ರಿಕ ಸಲಹೆಗಾರರು ಯೋಜನೆಗೆ ಸಂಬಂಧಿಸಿದ ಅಂಶಗಳನ್ನು ಸಭೆಯಲ್ಲಿ ಮಂಡಿಸಿದರು.

ಸಭಾಧ್ಯಕ್ಷರು ಯೋಜನೆಯನ್ನು ಸಂಕ್ಷಿಪ್ತವಾಗಿ ಸಾರ್ವಜನಿಕರಿಗೆ ವಿವರಿಸಿ ಸಾರ್ವಜನಿಕರಲ್ಲಿ ಏನಾದರೂ ಸಲಹೆ, ಸೂಚನೆ, ಟೀಕೆ-ಟಿಪ್ಪಣಿ/ಅಹವಾಲುಗಳು ಇದ್ದಲ್ಲಿ ಮುಕ್ತವಾಗಿ ಲಿಖಿತ ರೂಪದಲ್ಲಾಗಲಿ ಅಥವಾ ಮೌಖಿಕವಾಗಿಯಾಗಲಿ ಸಭೆಯಲ್ಲಿ ಮಂಡಿಸುವಂತೆ ಹಾಗೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸುವಂತೆ ಸೂಚಿಸಿದರು.

ಅದರಂತೆ ಸಭೆಯಲ್ಲಿ ಹಾಜರಿದ್ದ ಈ ಕೆಳಕಂಡ ಗ್ರಾಮಸ್ಥರು ತಮ್ಮ ಅಭಿಪ್ರಾಯಗಳನ್ನು ಈ ಕೆಳಗಿನಂತೆ ವ್ಯಕ್ತ ಪಡಿಸಿದರು:

1) <u>ಶ್ರೀ ನಿಂಗಪ್ಪ ರೈತ ಸಂಘದ ಉಪಾಧ್ಯಕ್ಷರು ಹಾಗೂ ಇತರ ರೈತ ಸಂಘದ ಸದಸ್ಯರು ವಡಗೇರ ಗ್ರಾಮ :-</u> ಇವರು ಮಾತನಾಡುತ್ತಾ ಸದರಿ ಗಣಿಗಾರಿಕೆಯಿಂದ ಆಗುವಂತಹ ತೊಂದರೆಗಳ ಬಗ್ಗೆ ತಿಳಿಸುತ್ತಾ ಲಿಖಿತವಾಗಿ ಸದರಿ ಮರಳು ಗಣಿಗಾರಿಕೆಯ ನಿರ್ಧಾರವನ್ನು ರದ್ದುಗೊಳಿಸಬೇಕೆಂದು ಕೋರುತ್ತಾ ಸಭೆಗೆ ಲಿಖಿತವಾಗಿ ಮನವಿಯನ್ನು ಸಲ್ಲಿಸಿದರು. (ಪ್ರತಿಯನ್ನು ಲಗತ್ತಿಸಿದೆ-ಅನುಬಂಧ-7).

- <u>ಮಾನ್ಯ ಅಧ್ಯಕ್ಷರು ಮನವಿಯನ್ನು ಸ್ವೀಕರಿಸುತ್ತಾ, ಸದರಿ ಮನವಿಯನ್ನು ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸುವುದಾಗಿ ತಿಳಿಸಿದರು.</u>

2) **ಶ್ರೀ ನಿಂಗಣ್ಣ ಕರಡಿ, ಅಧ್ಯಕ್ಷರು ದಲಿತ ಸಂಘರ್ಷ ಸಮಿತಿ (ರಿ) ಯಕ್ಷಂತಿ ಗ್ರಾಮ: ಇವರು ಮಾತನಾಡುತ್ತಾ** ಸದರಿ ಗಣಿಗಾರಿಕೆಯಿಂದ ಆಗುವಂತಹ ತೊಂದರೆಗಳ ಬಗ್ಗೆ ತಿಳಿಸುತ್ತಾ ಲಿಖಿತವಾಗಿ ಸದರಿ ಮರಳು ಗಣಿಗಾರಿಕೆಯ ನಿರ್ಧಾರವನ್ನು ರದ್ದುಗೊಳಿಸಬೇಕೆಂದು ವಿನಂತಿಸುತ್ತಾ ತಮ್ಮ ಸಂಘಟನೆ ಹಾಗೂ ರೈತ ಸಂಘಗಳೊಂದಿಗೆ ಬೃಹತ್ ಪ್ರತಿಭಟನೆ ಮಾಡುವುದಾಗಿ ಸಭೆಗೆ ಲಿಖಿತವಾಗಿ ಮನವಿಯನ್ನು ಸಲ್ಲಿಸಿದರು. (ಪ್ರತಿಯನ್ನು ಲಗತ್ತಿಸಿದೆ-ಅನುಭಂದ-8).

- **ಮಾನ್ಯ ಅಧ್ಯಕ್ಷರು ಮನವಿಯನ್ನು ಸ್ವೀಕರಿಸುತ್ತಾ, ಸದರಿ ಮನವಿಯನ್ನು ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸುವುದಾಗಿ ತಿಳಿಸಿದರು.**

3) **ಶ್ರೀ ಸಿದ್ದಣ್ಣ ಪೂಜಾರಿ ಯಕ್ಷಂತಿ ಗ್ರಾಮ: ಇವರು ಮಾತನಾಡುತ್ತಾ:**

1. ಇವರು ಸಹ ಒಬ್ಬ ಸಿವಿಲ್ ಸರ್ವಿಸ್ ಆಸ್ಪಿರೆಂಟ್ ಆಗಿದ್ದು, ಊರನ್ನು ಕೊಳ್ಳೆ ಹೊಡೆದ ನಂತರ, ಬಾಗಿಲ್ಲನ್ನು ಹಾಕಿದಂತೆ ಊರಿನ ಪರಿಸ್ಥಿತಿಯಾಗಿದೆ. ತಮ್ಮ ಊರಿಂದ ಸಂಪತ್ತು ಹೊಗುತ್ತಾ ಇದ್ದರೂ ಗ್ರಾಮದಲ್ಲಿ ಯಾವುದೇ ಅಭಿವೃದ್ಧಿ ಕೆಲಸವಾಗಿರುವುದಿಲ್ಲ ಹಾಗೂ ಈಗಾಗಲೇ ಸಿದ್ದಪಡಿಸಿರುವ ಪರಿಸರ ಅಘಾತ ಅಂದಾಜು ವರದಿಯ ಬಗ್ಗೆ ಯಾವುದೇ ತಕರಾರು ಇಲ್ಲವೆಂದು ತಿಳಿಸಿದರು.
2. ಪರಿಸರ ಸಲಹೆಗಾರರು ಇಗಾಗಲೇ ತಿಳಿಸಿದಂತೆ ಮೈನಿಂಗ್‌ನ ಮಾಹಿತಿ ಹಾಗೂ ವಿಧಾನಗಳ ಬಗ್ಗೆ ತಮಗೆ ಸರಿಯಾಗಿ ತಿಳಿದಿಲ್ಲವೆಂದು ತಿಳಿಸುತ್ತಾ ಊರಿನ ಅಭಿವೃದ್ಧಿ ವಿಷಯ ಬಂದರೆ ಗ್ರಾಮಸ್ಥರು ಹಾಗೂ ತಾವುಗಳು ಎಲ್ಲರೂ ಒಂದೇ ಎಂದು ತಿಳಿಸಿದರು.
3. ತಮ್ಮ ಊರಿನಿಂದ ಸಂಪತ್ತು ಹೊದರು ಸಹ ತಮ್ಮ ಊರಿಗೆ ಹೆಸರು ಬರುತ್ತದೆ ಹಾಗೂ ಸಂಪತ್ತು ಹೊದರು ಸಹ ತಮ್ಮ ಊರಿಗೆ ಉಪಯೋಗ ವಾಗಬೇಕೆಂದು ಹಾಗೂ ಸ್ಥಳೀಯರಿಗೆ/ಗ್ರಾಮಸ್ಥರಿಗೆ ಉದ್ಯೋಗ ಸಿಗಬೇಕೆಂದು ಮತ್ತು ಬೇರೆ ಊರಿಂದ/ಕಲಬುರಗಿದವರಿಗೆ ಉದ್ಯೋಗ ನೀಡುವುದಕ್ಕೆ ತಮ್ಮ ವಿರೋದವಿರುತ್ತದೆ ಎಂದು ತಿಳಿಸಿದರು.
4. ಗ್ರಾಮದ ಅಭಿವೃದ್ಧಿಯಾಗಬೇಕು ಮತ್ತು ಊರಿನ ಗ್ರಾಮಸ್ಥರು/ಹುಡುಗರು/ಗೌಡರು ಯಾರೇ ಹೇಳಿದರು ವಿಷಯವನ್ನು ಅಧಿಕಾರಿಗಳು ಗಮನಿಸಬೇಕೆಂದು ಕೋರಿದರು.
5. ಈಗಾಗಲೇ, ಪರಿಸರ ಸಲಹೆಗಾರರು ತಿಳಿಸಿದಂತೆ, ಇನ್ನೂ ಕೆಲವು ಅಂಶಗಳನ್ನು ತಿಳಿಸಬೇಕಿತ್ತು ಮತ್ತು ಗ್ರಾಮದಲ್ಲಿ ಹಗಲು ರಾತ್ರಿ ಎನ್ನದೆ ಈಗಾಗಲೇ ಮರಳು ಗಣಿಗಾರಿಕೆ ಮಾಡುತ್ತಿರುವುದರಿಂದ ಹಾಗೂ ವಾಹನಗಳನ್ನು ಎಲ್ಲೆಂದರಲ್ಲಿ ನಿಲ್ಲಿಸುವುದರಿಂದ ಗ್ರಾಮದಲ್ಲಿರುವ ಕುಟುಂಬಸ್ಥರಿಗೆ, ಶಾಲೆಗೆ ತೊಂದರೆಯಾಗುತ್ತಿದೆ ಎಂದು ಸಭೆಗೆ ತಿಳಿಸಿದರು.
6. ಗ್ರಾಮದಲ್ಲಿ ನೀರಿನ ಸಮಸ್ಯೆ ಇರುವುದರಿಂದ, ಗ್ರಾಮಕ್ಕೆ ಹೆಣ್ಣು ಕೊಡುವುದಕ್ಕೆ ಹಿಂದೆ-ಮುಂದೆ ನೋಡುತ್ತಿದ್ದಾರೆ ಹಾಗೂ ಗ್ರಾಮದಲ್ಲಿ ಎಲ್ಲೇ ಬೋರವೆಲ್ಲ ಹಾಕಿದರೂ ನೀರು ಬರುತ್ತಿಲ್ಲವೆಂದು ತಿಳಿಸುತ್ತಾ ಗ್ರಾಮವು ಅಭಿವೃದ್ಧಿಯಾಗಿಲ್ಲವೆಂದು ಜನ ಮಾತನಾಡುತ್ತಿರುವದರಿಂದ ಹಾಗೂ ಕೇವಲ ಸಂಪತ್ತು ಇದ್ದರೂ ಸಹ ಅಭಿವೃದ್ಧಿಯಾಗಿಲ್ಲವೆಂದು ಇನ್ನೂ 20ವರ್ಷಗಳ ತನಕ ಅಭಿವೃದ್ಧಿಯಾಗಲ್ಲವೆಂದು ಜನ ಮಾತನಾಡುತ್ತಿದ್ದಾರೆ ಎಂದು ತಿಳಿಸಿದರು.
7. ಗ್ರಾಮದಲ್ಲಿರುವ ಸಂಪತ್ತನ್ನು ಕೇವಲ ಕೊಳ್ಳೆ ಹೊಡೆದಿದ್ದು ಅಭಿವೃದ್ಧಿಯಾಗಿಲ್ಲವೆಂದು ತಿಳಿಸಿದರು.

8. ಸದರಿ ದಿನದಂದು ಸಭೆಯನ್ನು ನಾಲ್ಕು ಗೋಡೆಗಳ ಮಧ್ಯದಲ್ಲಿ ನಡೆಸದೆ, ಇಷ್ಟು ಜನ ಗ್ರಾಮಸ್ಥರ ಮುಂದೆ ನಡೆಸಲು ಆಗಮಿಸಿದಂತಹ ಮಾನ್ಯ ಅಪರ ಜಿಲ್ಲಾಧಿಕಾರಿಗಳನ್ನು ಕಂಡು ಜನರಿಗೆ ಆನಂದವಾಗಿರುವುದಾಗಿ ತಿಳಿಸಿದರು.

9. ಗ್ರಾಮದಲ್ಲಿ ಒಂದೇ ಶಾಲೆಯಿದ್ದು, 1 ರಿಂದ 5ನೇ ತರಗತಿವರೆಗೆ ಇದ್ದು, ಕೇವಲ ಒಬ್ಬ ಶಿಕ್ಷಕರು ಮಾತ್ರ ಇರುತ್ತಾರೆ ಹಾಗೂ 25% ಕೆಲಸವನ್ನು ಮಾಡುವಂತೆ ಪಿ.ಡಿ.ಓ ತಿಳಿಸಿದರು ಸಹ ಯಾರು ಕೆಲಸವನ್ನು ಮಾಡುವುದಿಲ್ಲವೆಂದು ಸಭೆಗೆ ತಿಳಿಸುತ್ತಾ ದೇವರು ವರ ಕೊಟ್ಟರೂ ಸಹ ಪೂಜಾರಿ ವರ ಕೊಡುವುದಿಲ್ಲವೆಂದು ತಿಳಿಸುತ್ತಾ ಗ್ರಾಮಸ್ಥರು ಇಲ್ಲಿ ಬಂದು ಮಾತನಾಡುವುದಕ್ಕೆ ಹಾಗೂ ಛಾಯಾಚಿತ್ರವನ್ನು ತೆಗೆದುಕೊಳ್ಳುವುದರಿಂದ ಏನಾದರೂ ತೊಂದರೆ ಮಾಡುತ್ತಾರೆ ಎಂದು ಭಯ-ಭೀತರಾಗಿದಾರೆ ಎಂದು ಸಭೆಗೆ ತಿಳಿಸಿದರು.

10. ಒಂದು ಗ್ಲಾಸಿಗೆ ಒಣ ಮರಳನ್ನು ತೆಗೆದುಕೊಂಡು ಅದಕ್ಕೆ ನೀರನ್ನು ಹಾಕಿದಾಗ ಎಷ್ಟು ಪ್ರಮಾಣದ ಮರಳು ಒಣಗಿರುತ್ತದೆಯೋ ಅಷ್ಟನ್ನು ಮಾತ್ರ ತೆಗೆಯಬೇಕು ಅದನ್ನು ಬಿಟ್ಟು, ಜೆಸಿಬಿಗಳಿಂದ ಮರಳನ್ನು ತೆಗೆದಾಗ, ಈಗಾಗಲೇ, ಮಸೂಳೆಗಳು ಎಷ್ಟೋ ಜನರನ್ನು ಹಿಡಿದಿರುತ್ತವೆ ಹಾಗೂ ಪರಿಸರದ ನಾರ್ಮ್ಸ್‌ಗಳು ಪಾಲನೆಯಾಗುತ್ತಿಲ್ಲವಾದ್ದರಿಂದ ಸರಿಯಾಗಿ ನಿಗಧಿತವಾಗಿ ನಡೆಯುತ್ತಿಲ್ಲವೆಂದು ತಿಳಿಸುತ್ತಾ, ನಿಸರ್ಗದ ಸಂಪತ್ತು ಮತ್ತೆ ತಮ್ಮೂರಿಗೆ ಬಂದು ಜಮಾ ಆಗುತ್ತದೆ ಎಂದು ಈಗಾಗಲೇ ದತ್ತಾಂಶಗಳನ್ನು ನೀಡಿರುತ್ತೀರಿ ಆದರೆ, ಇಲ್ಲಿ ಮಿತಿಮಿರಿ ಮರಳು ಗಣಿಗಾರಿಕೆಯನ್ನು ಮಾಡುತ್ತಿರುವುದರಿಂದ ಅಧಿಕಾರಿಗಳನ್ನ ಹಾಗೂ ಗ್ರಾಮಸ್ಥರನ್ನು ದ್ವೇಷಿಸುವುದಿಲ್ಲ ಹಾಗೂ ಎರಡು ಕೈ ಸೇರಿದಾಗ ಮಾತ್ರ ಚಪ್ಪಾಳೆ ಆಗುತ್ತದೆ ಎಂದು ತಿಳಿಸುತ್ತಾ ಗ್ರಾಮಸ್ಥರಿಗೆ ತಮ್ಮ ಅನಿಸಿಕೆಗಳನ್ನ ಸಭೆಗೆ ತಿಳಿಸುವಂತೆ ಹೇಳುತ್ತಾ ಗ್ರಾಮದ ಸಂಪತ್ತು ಹೊದರು ಸಹ ಗ್ರಾಮದ ಅಭಿವೃದ್ಧಿಯಾಗಬೇಕೆಂದು ಸಭೆಗೆ ತಿಳಿಸಿದರು.

➢ **ಮಾನ್ಯ ಅಧ್ಯಕ್ಷರು ಪ್ರತಿಕ್ರಿಯಿಸುತ್ತಾ, ಶ್ರೀ ಸಿದ್ದಣ್ಣ ಪೂಜಾರಿಯವರು ಒಳ್ಳೆಯ ಸಲಹೆಯನ್ನು ನೀಡಿರುತ್ತಾರೆ ಹಾಗೂ ತಹಸೀಲ್ದಾರರು, ಪರಿಸರ ಇಲಾಖೆಯವರು ಯಾವುದೇ ದೂರುಗಳು ಬಂದಲ್ಲಿ ಅದರ ಪರಿಣಾಮದ ಬಗ್ಗೆ ಸಂಪರ್ಕವನ್ನು ಮಾಡಬೇಕು ಹಾಗೂ ತಾವುಗಳು ಸಹ ಸಂಪರ್ಕದಲ್ಲಿರುವುದಾಗಿ ತಿಳಿಸುತ್ತಾ, ಸದರಿ ಗಣಿಗಾರಿಕೆಯಿಂದ ಬರುವ ರಾಜಧನ(ರಾಯಲ್ಟಿ)ಕೋಶವನ್ನು ಸ್ಥಾಪಿಸಿ ಗ್ರಾಮದ ಅಭಿವೃದ್ಧಿ & ಶಿಕ್ಷಣದ ಕೆಲಸಗಳನ್ನು ಸರ್ಕಾರದಿಂದ ಮಾಡಲಾಗುತ್ತದೆ ಎಂದು ತಿಳಿಸುತ್ತಾ ಕೇಂದ್ರ ಸರ್ಕಾರಕ್ಕೂ ಸಹ ನಡುವಳಿಯನ್ನು ಸಲ್ಲಿಸುವುದಾಗಿ ತಿಳಿಸಿದರು.**

<u>ಶ್ರೀ ಸಿದ್ದಣ್ಣ ಪೂಜಾರಿ ಯಕ್ಷಂತಿ ಗ್ರಾಮ:</u> ಇವರು ಮಾತನಾಡುತ್ತಾ ಗ್ರಾಮದ ಹೆಬ್ಬಾಗಿಲು ಚೆನ್ನಾಗಿದ್ದು ನೋಡುವುದಕ್ಕೆ ನಾಲ್ಕು ಬಿಲ್ಡಿಂಗ್‌ಗಳು ಚೆನ್ನಾಗಿದ್ದರೂ ಗ್ರಾಮದ ಹಿಂಬಾಗದಲ್ಲಿ ಅನೇಕ ಮನೆಗಳ ಗೋಡೆಗಳು ಬಿದ್ದಿರುತ್ತವೆ ಹಾಗೂ ಮನೆಗಳು ಕುಸಿದಿರುತ್ತವೆ ಎಂದು ತಿಳಿಸುತ್ತಾ ಮನೆಗಳ ಸಮಸ್ಯೆಗಳು ಬಹಳ ಇವೆ ಎಂದು ತಿಳಿಸಿದರು.

➢ **ಮಾನ್ಯ ಅಧ್ಯಕ್ಷರು ಪ್ರತಿಕ್ರಿಯಿಸುತ್ತಾ, ಈಗಾಗಲೇ ತಾವುಗಳು ಅನೇಕ ಸಲ ಗ್ರಾಮವನ್ನು ಮತ್ತು ಗ್ರಾಮದ ಒಳಗಡೆ ಸಂಚಾರಿಸುವುದಾಗಿ ತಿಳಿಸುತ್ತಾ ಮನವಿದಾರರ ಸಾಮಾಜಿಕ ಕಾಳಜಿ ಅಲ್ಲದೇ ಬೇರೆ ವಿಷಯಗಳು ಇದ್ದಲ್ಲಿ ವ್ಯಕ್ತಪಡಿಸಬೇಕೆಂದು ಆದೇಶಿಸಿದರು.**

**ಶ್ರೀ ಸಿದ್ದಣ್ಣ ಪೂಜಾರಿ ಯಕ್ಷಂತಿ ಗ್ರಾಮ:** ಇವರು ಮಾತನಾಡುತ್ತಾ ತಮ್ಮ ವ್ಯಯಕ್ತಿಕ ಲಾಭ ಏನು ಇಲ್ಲವೆಂದು ತಿಳಿಸುತ್ತಾ ಗ್ರಾಮದ ಅಭಿವೃದ್ದಿಗಾಗಿ, ಇಲ್ಲಿನ ಜನ ದುಡಿಯುತ್ತಾರೆ-ತಿನ್ನುತ್ತಾರೆ ಮತ್ತು ಮಕ್ಕಳ ಶಿಕ್ಷಣಕ್ಕಾಗಿ ಪ್ರಸ್ಥುತ ಪರಿಸ್ಥಿತಿಯು ಹೊಡೆಯುವುದು-ಬಡೆಯುವುದರಿಂದ ಊರೆ ಸರ್ವನಾಶವಾಗುತಿರುವುದರಿಂದ ಮಕ್ಕಳು ಶಿಕ್ಷಣಕ್ಕಾಗಿ ಬೇರೆ ಊರುಗಳಿಗೆ ಹೊಗುತ್ತಾರೆ ಎಂದು ತಿಳಿಸಿದರು. ತಾವು ಓದುತ್ತಿರುವಾಗ ನಾಲ್ಕು ಜನ ಶಿಕ್ಷಕರಿರುವುದಾಗಿ ತಿಳಿಸುತ್ತಾ ಪ್ರಸ್ಥುತ ಒಬ್ಬ ಶಿಕ್ಷಕರು ಮಾತ್ರ ಇರುತ್ತಾರೆಂದು ತಿಳಿಸಿದರು ಹಾಗೂ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡುವಂತೆ ಹಾಗೂ ಗ್ರಾಮದ ಅಭಿವೃದ್ಧಿ ಮಾಡುವಂತೆ ಅಧ್ಯಕ್ಷರಲ್ಲಿ ಮನವಿ ಮಾಡಿದರು.

- **ಮಾನ್ಯ ಅಧ್ಯಕ್ಷರು ಪ್ರತಿಕ್ರಿಯಿಸುತ್ತಾ, ಈಗಾಗಲೇ ವೇದಿಕೆಯಲ್ಲಿ ಮಂಡಿಸಿದಂತಹ ವಿಷಯಗಳಿಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು ಸಂಘಟನೆಯ ಜವಾಬ್ದಾರಿಯಾಗಿರುತ್ತದೆ ಎಂದು ತಿಳಿಸಿದರು.**

**4) ಶ್ರೀ ರಾಮನಗೌಡ ಹೈಯಾಳ (ಬಿ) ಗ್ರಾಮ ಇವರು ಮಾತನಾಡುತ್ತಾ:** ತಮ್ಮ ತಾಯಿ ಶ್ರೀಮತಿ ರಾಚಮ್ಮ ಗಂಡ ಸಿದ್ರಾಮಗೌಡ ಇವರ ಹೆಸರಿನಲ್ಲಿರುವ ಸರ್ವೆ ನಂ. 91ರಲ್ಲಿ ಪಟ್ಟಾ ಜಮೀನಿದ್ದು ತಮಗೆ ಸರಿಯಾದ ಮಾಹಿತಿಯನ್ನು ನೀಡಿಲ್ಲವಾದ್ದರಿಂದ ತಮ್ಮ ಆಕ್ಷೇಪಣೆ ಇದೆ ಎಂದು ಮಾನ್ಯ ಅಧ್ಯಕ್ಷರಿಗೆ ತಿಳಿಸಿದರು.

**ಅಂತಿಮವಾಗಿ ಸಭಾಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಸಭೆಯಲ್ಲಿ ಈ ಯೋಜನೆಗೆ ಸಂಬಂಧಿಸಿದಂತೆ ವ್ಯಕ್ತವಾದ ಅನಿಸಿಕೆಗಳನ್ನು/ಅಭಿಪ್ರಾಯಗಳನ್ನು/ಲಿಖಿತ ಸಲ್ಲಿಕೆಗಳ ಸಾರಾಂಶವನ್ನು ಮತ್ತೊಮ್ಮೆ ಸಭೆಗೆ ತಿಳಿಸುತ್ತಾ ಸದರಿ ಸಭೆಯ ನಡುವಳಿಗಳೊಂದಿಗೆ ಯಥಾವತ್ತಾಗಿ ಬರೆದು ವಿಡಿಯೋ ಮತ್ತು ಛಾಯಾಚಿತ್ರಗಳೊಂದಿಗೆ ಮುಂದಿನ ಕ್ರಮಕ್ಕಾಗಿ ಸರಕಾರಕ್ಕೆ ಸಲ್ಲಿಸಲಾಗುವುದೆಂದು ಸಭೆಗೆ ತಿಳಿಸಿದರು.**

ಅಧಿಸೂಚನೆಯು ಪ್ರಕಟವಾದಗಿನಿಂದ ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಯಾದಗಿರಿಯಲ್ಲಿ ಮತ್ತು ಸಭೆಯಲ್ಲಿ ಸ್ವೀಕೃತಿಯಾದ ಮನವಿ/ದೂರು ಇತ್ಯಾದಿಗಳ ಪ್ರತಿಗಳನ್ನು (ಅನುಭಂದ-1,2,3,4,5,6,9,10) ಈ ನಡುವಳಿಯೊಂದಿಗೆ ಲಗತ್ತಿಸಿದೆ.

ಶ್ರೀ. ರಾಘು ಹಟ್ಟಿ ಗೋಲ್ಡ್ ಮೈನ್ಸ್ ಕಂ.ಲಿ. ರಾಯಚೂರು ಇವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಶ್ರೀ ಶಂಕರಗೌಡ ಸೋಮನಳ
ಕೆ.ಎ.ಎಸ್. (ಆಯ್ಕೆ ಶ್ರೇಣಿ)
ಅಪರ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಪರಿಸರ ಸಾರ್ವಜನಿಕ ಸಭೆ, ಯಾದಗಿರಿ
ತಾ।। & ಜಿ।। ಜಿಲ್ಲೆ ಯಾದಗಿರಿ.